1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

Spl.C.150/2023

ದಿಃ 06.07.2024
(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-4 Pw-4

| | | |
|---|---|---|
| ಹೆಸರು | ಃ | ಊದೇಶ |
| ತಂದೆಯ ಹೆಸರು | ಃ | ದುರ್ಗೇಗೌಡ |
| ವಯಸ್ಸು | ಃ | 44 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸಸ್ಥಳ | ಃ | ವಾಡೆದೊಡ್ಡಿ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನನಗೆ ಚಾಸಾ.1ರಿಂದ 3 ಗೊತ್ತು.

2. ಸದರಿಯವರು ಹಿಂದೂ ಸೇರಿದ ಹಿಂದೂ ಕೊರಮ ಜಾತಿಗೆ ಸೇರಿದವರಾಗಿರುತ್ತಾರೆ.

3. ಈಗ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ಹಿಂದೂ ಕುರುಬ ಸಮುದಾಯಕ್ಕೆ ಸೇರಿದವರಾಗಿದ್ದು ನನಗೆ ಗೊತ್ತು.

4. ಆರೋಪಿತನಿಗೆ ಸದರಿಯವರ ಜಾತಿ ಗೊತ್ತು.

5. ಈಗ ಸುಮಾರು 9-10 ತಿಂಗಳುಗಳ ಹಿಂದೆ ಒಂದು ದಿನ ಬೆಳಿಗ್ಗೆ ಸುಮಾರು 11.00 ಗಂಟೆ ಸಮಯದಲ್ಲಿ ಚಾಸಾ.2 ಈತನಿಗೆ ಚಾಸಾ.1 ಇವಳು ಬೆಳಗ್ಗಿನ ತಿಂಡಿ ಮಾಡಿಸಲೆಂದು ಕೈ ಹಿಡಿದುಕೊಂಡು

ಹೋಗುತ್ತಿದ್ದಾಗ ಆರೋಪಿತನು ಹಿಂದಿನಿಂದ ಒಮ್ಮಿಂದೊಮ್ಮೆಲೆ ದ್ವಿಚಕ್ರ ವಾಹನವನ್ನು ತೆಗೆದುಕೊಂಡು ಬಂದಿದ್ದಕ್ಕೆ ಚಾಸಾ.1 ಇವಳು ಪ್ರಶ್ನಿಸಿರುತ್ತಾಳೆ.

6. ಅದಕ್ಕೆ ಆರೋಪಿತನು ಚಾಸಾ.1 ಇವಳಿಗೆ ಮತ್ತು ಚಾಸಾ.2 ಇವನಿಗೆ ತಲಾ ಒಂದು ಏಟಿನಂತೆ ಹೊಡೆದು ಬಂದಿರುತ್ತಾನೆ.

7. ಅದೂ ಅಲ್ಲದೇ ಚಾಸಾ.1 ಮತ್ತು ಚಾಸಾ.2 ಈತನಿಗೆ ಆರೋಪಿತನು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ.

8. ತದನಂತರ, ಚಾಸಾ.1 ಮತ್ತು 2 ಇವರು ದೂರನ್ನು ಸಲ್ಲಿಸಲು ಹೋಗಿರುತ್ತಾರೆ.

9. ಮಾರನೇ ದಿನ ಮಧ್ಯಾಹ್ನ ಸುಮಾರು 1.00 ಗಂಟೆ ಸಮಯದಲ್ಲಿ ಚಾಸಾ.1 ಮತ್ತು 2 ಇವರ ತೋರಿಕೆಯ ಮೇರೆಗೆ ಘಟಾನ ಸ್ಥಳಕ್ಕೆ ಪೊಲೀಸರು ಬಂದು ಒಂದು ಸ್ಥಳ ಪಂಚನಾಮೆಯನ್ನು ಮಾಡಿ ಅದರ ಮೇಲೆ ನನ್ನ ಸಹಿಯನ್ನು ಪಡೆದಿರುತ್ತಾರೆ.

10. ಸದರಿ ಸ್ಥಳ ಪಂಚನಾಮೆಯನ್ನು ಈಗ ನೋಡಿ ಗುರುತಿಸುತ್ತಿದ್ದು, ಅದನ್ನು ಈಗಾಗಲೇ ನಿ.ಪಿ.2 ಎಂದು ಗುರುತಿಸಲಾಗಿದ್ದು, ಅದರ ಮೇಲಿರುವ ನನ್ನ ಸಹಿಯನ್ನು ಈಗ ನಿ.ಪಿ.2(ಎ) ಎಂದು ಗುರುತಿಸಲಾಯಿತು.

11. ಅದೇ ಸಮಯದಲ್ಲಿ ನಿ.ಪಿ.2ಕ್ಕೆ ಸಂಬಂಧಿಸಿದಂತೆಯೇ ಪೊಲೀಸರು ಎರಡು ವರ್ಣರಂಜಿತ ಛಾಯಾಚಿತ್ರಗಳನ್ನು ತೆಗೆಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದು, ಅವುಗಳನ್ನು ಈಗಾಗಲೇ ನಿ.ಪಿ.3 ಮತ್ತು 4 ಎಂದು ಗುರುತಿಸಿದ್ದು ಇರುತ್ತವೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಆದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)**

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ</u>

12. ಚಾಸಾ.2 ಈತನಿಗೆ ಆರೋಪಿತನು ಕೊರಮ ನನ್ನ ಮಗನೇ ಎಂದು ಬೈದಿದ್ದಲ್ಲದೇ, ನಿಮ್ಮ ಶೆಡ್ಡಿಗೆ ಬೆಂಕಿ ಹಾಕಿ ಸುಡುತ್ತೇನೆ ಎಂದು ಬೆದರಿಕೆ ಹಾಕಿರುತ್ತಾನೆ ಎನ್ನುವುದು ಸರಿ.

<u>ಪಾಟೀ ಸವಾಲುಃ ಶ್ರೀ. ಡಿ.ಆರ್.ಜೆ., ವಕೀಲರಿಂದ ಆರೋಪಿಯ ಪರವಾಗಿಃ</u>

13. ನಮ್ಮ ಮನೆಗೂ ಮತ್ತು ಆರೋಪಿತನ ಮನೆಗೂ ಸುಮಾರು 50 ಮೀಟರ್‌ಗಳ ಅಂತರ ಇರುತ್ತದೆ.

14. ನಮ್ಮ ಮನೆಗೂ ಮತ್ತು ನ್ಯಾಯಬೆಲೆ ಅಂಗಡಿಗೂ 100 ಮೀಟರ್‌ಗಳ ಅಂತರವಿದ್ದು ಅದು ನಮ್ಮ ಮನೆಯಿಂದ ಕಾಣಿಸುತ್ತದೆ.

15. ನಾನು ಸ್ಥಳಕ್ಕೆ ಬರುವಾಗ ಘಟನೆ ನಡೆದಿತ್ತು.

16. ನಾನು ನಡೆದುಕೊಂಡು ಬರುತ್ತಿದ್ದೆನು.

17. ನಮ್ಮ ಮನೆಯಿಂದ ನ್ಯಾಯಬೆಲೆ ಅಂಗಡಿಯು ಸುಮಾರು 250 ಮೀಟರ್ ಅಂತರದಲ್ಲಿರುತ್ತದೆ ಎನ್ನುವುದು ಸರಿ.

18. ಸದರಿ ನ್ಯಾಯಬೆಲೆ ಅಂಗಡಿಯ ಹತ್ತಿರ ನಿಂತುಕೊಂಡರೆ ನಮ್ಮಮ ಮನೆಯಾಗಲೀ ಅಥವಾ ಚಾಸಾ.1 ಇವಳ ಮನೆಯಾಗಾಲೀ ಕಾಣುವುದಿಲ್ಲ ಎಂದರೆ ನಿಜ, ಸಾಕ್ಷಿ ಸ್ವತಃ ನುಡಿಯುತ್ತಾರೆ ಗುಡ್ಡ ಇದ್ದುದ್ದರಿಂದ ಕಾಣುವುದಿಲ್ಲ ಎಂದು.

19. ಸದರಿ ಜಗಳದಲ್ಲಿ ಹೊಡೆದಾಟವಾಗಿ ಈಚೆಗೆ ಬರುತ್ತಿದ್ದಾಗ ಕೊನೆಯ ಹಂತದಲ್ಲಿ ನಾನು ಬಂದಿರುತ್ತೇನೆ.

20. ನಾನು ಹೋಗುವಷ್ಟರಲ್ಲಿ ಚಾಸಾ.1 ನೆಲಕ್ಕೆ ಬಿದ್ದಿದ್ದಳು.

21. ತಮಗೆ ಆರೋಪಿತನು ಹೊಡೆದಿರುವ ವಿಚಾರ ಚಾಸಾ.1ರಿಂದ 3 ಹಾಗೂ ಬೇರೆ ಯಾರೂ ನನಗೆ ಹೇಳಿರುವುದಿಲ್ಲ.

22. ನನಗೆ ಪೊಲೀಸರು ಪಂಚನಾಗಲೆಂದು ಕರೆದಿರಲಿಲ್ಲ.

23. ಚಾಸಾ.5 ನನಗೆ ಕರೆದುಕೊಂಡು ಹೋಗಿರುತ್ತಾನೆ.

24. ಪೊಲೀಸರು ನಿ.ಪಿ.2ರಲ್ಲಿ ಏನು ಬರೆದುಕೊಂಡಿರುತ್ತಾರೆ ಎಂಬುದು ನನಗೆ ಮಾಹಿತಿ ಇರುವುದಿಲ್ಲ ಎನ್ನುವುದು ಸರಿ.

25. ಪೊಲೀಸರು ಸದರಿ ಮಹಜರ್‌ನ್ನು ಮಧ್ಯಾಹ್ನ 12.00 ರಿಂದ 1.00 ಗಂಟೆಯವರೆಗೆ ಮಾಡಿರುತ್ತಾರೆ.

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.